# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಆರ್. ಧರ್ಮಸೇನ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 794
ಉತ್ತರಿಸಬೇಕಾದ ದಿನಾಂಕ : 15.12.2020

<table>
<tr><th>ಕ್ರಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ಯೋಜನೆಯಲ್ಲಿ ಎಷ್ಟು ರೈತರಿಗೆ ಸಾಲ ನೀಡಲಾಗಿದೆ;</td><td>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ಬೆಳೆ ಸಾಲ ವಿತರಿಸುವ ಯೋಜನೆ ಮತ್ತು ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆಯಲ್ಲಿ ಸಹಕಾರ ಸಂಘಗಳ ಮೂಲಕ ಕಳೆದ ಎರಡು ವರ್ಷಗಳಲ್ಲಿ ರೈತರಿಗೆ ವಿತರಿಸಿದ ಸಾಲದ ವಿವರವನ್ನು ಈ ಕೆಳಗೆ ನೀಡಲಾಗಿದೆ.<br>
<table>
<tr><th rowspan="2">ಸಹಕಾರ ಸಂಘಗಳು</th><th rowspan="2">ಸಾಲದ ವಿಧ</th><th colspan="2">ಮೈಸೂರು ಜಿಲ್ಲೆ</th><th colspan="2">ಚಾಮರಾಜನಗರ ಜಿಲ್ಲೆ</th></tr>
<tr><th>2018-19</th><th>2019-20</th><th>2018-19</th><th>2019-20</th></tr>
<tr><td rowspan="2">ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ</td><td>ಅಲ್ಪಾವಧಿ ಕೃಷಿ ಸಾಲ</td><td>43,343</td><td>34,744</td><td>14,963</td><td>11,085</td></tr>
<tr><td>ಮಧ್ಯಮಾವಧಿ /ದೀರ್ಘಾವಧಿ ಕೃಷಿ ಸಾಲ</td><td>859</td><td>1306</td><td>18</td><td>140</td></tr>
<tr><td>ಪಿಕಾರ್ಡ್ ಬ್ಯಾಂಕುಗಳ ಮೂಲಕ</td><td>ಮಧ್ಯಮಾವಧಿ /ದೀರ್ಘಾವಧಿ ಕೃಷಿ ಸಾಲ</td><td>722</td><td>717</td><td>108</td><td>239</td></tr>
</table></td></tr>
<tr><td>ಆ)</td><td>ಈ ಯೋಜನೆಯಡಿ ನೀಡುವ ಸಾಲದ ಗರಿಷ್ಠ ಮತ್ತು ಕನಿಷ್ಠ ಮೊತ್ತ ಎಷ್ಟು;</td><td>ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ಬೆಳೆ ಸಾಲ ವಿತರಿಸುವ ಯೋಜನೆಯಲ್ಲಿ ಕುಟುಂಬಕ್ಕೆ ಗರಿಷ್ಠ ರೂ.3.00 ಲಕ್ಷಗಳವರೆಗಿನ ಸಾಲದ ಮಿತಿಯನ್ನು ನಿಗದಿಪಡಿಸಲಾಗಿದೆ. ಕನಿಷ್ಠ ಸಾಲದ ಮಿತಿ ನಿಗದಿಯಾಗಿರುವುದಿಲ್ಲ.<br><br>ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆಯಲ್ಲಿ ಕುಟುಂಬಕ್ಕೆ ಗರಿಷ್ಠ ರೂ.10.00 ಲಕ್ಷಗಳವರೆಗಿನ ಸಾಲದ ಮಿತಿಯನ್ನು ನಿಗದಿಪಡಿಸಲಾಗಿದೆ. ಕನಿಷ್ಠ ಸಾಲದ ಮಿತಿ ನಿಗದಿಯಾಗಿರುವುದಿಲ್ಲ.</td></tr>
<tr><td>ಇ)</td><td>ಮೇಲ್ಕಂಡ ಎರಡು ಜಿಲ್ಲೆಗಳಲ್ಲಿ ಎಷ್ಟು ರೈತರಿಗೆ ಸಾಲ ಮನ್ನಾ ಮಾಡಲಾಗಿದೆ; ಸಾಲ ಮನ್ನಾ ಮಾಡಲು ಸರ್ಕಾರ ವಿಧಿಸಿರುವ ಮಾನದಂಡಗಳೇನು?</td><td>ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಸಹಕಾರ ಸಂಘಗಳಲ್ಲಿ ಕ್ರಮವಾಗಿ 49,430 ಮತ್ತು 16,421 ರೈತರಿಗೆ ಸಾಲ ಮನ್ನಾ ಮಾಡಲಾಗಿದೆ.<br>ಸಾಲ ಮನ್ನಾ ಮಾಡಲು ಸರ್ಕಾರವು ವಿಧಿಸಿದ ಮಾನದಂಡಗಳು ಈ ಕೆಳಗಿನಂತಿರುತ್ತವೆ.<br>1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಡಿಸಿಸಿ ಬ್ಯಾಂಕುಗಳು, ಪಿಕಾರ್ಡ್ ಬ್ಯಾಂಕುಗಳು ಹಾಗೂ ಲ್ಯಾಂಪ್ಸ್‌ಗಳಲ್ಲಿ ರೈತರು ದಿ:10.07.2018ಕ್ಕೆ ಹೊರಬಾಕಿ ಹೊಂದಿರುವ ಬೆಳೆ ಸಾಲದಲ್ಲಿ ಒಂದು ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆವಿಗೆ ಮನ್ನಾ ಆಗುತ್ತದೆ.</td></tr>
</table>

| | | |
|---|---|---|
| | | 2. ಈ ಯೋಜನೆ ಕೆಳಕಂಡವರಿಗೆ ಅನ್ವಯವಾಗುವುದಿಲ್ಲ.<br>• ರೂ.20,000 ಹೆಚ್ಚಿನ ವೇತನ/ಪಿಂಚಣಿ ಪಡೆಯುವ ಸರ್ಕಾರಿ, ಸಹಕಾರ ಮತ್ತು ಇತರೇ ಕ್ಷೇತ್ರದ ನೌಕರರು<br>• ಕಳೆದ ಮೂರು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಆದಾಯ ತೆರಿಗೆ ಪಾವತಿದಾರರು<br>3. ದಿ:10–7–2018 ಕ್ಕೆ ಹೊರಬಾಕಿ ಚಾಲ್ತಿ ಇದ್ದಲ್ಲಿ, ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ಗಡುವಿನ ದಿನಾಂಕದೊಳಗೆ ಮರುಪಾವತಿಸತಕ್ಕದ್ದು.<br>4. ಬೆಳೆ ಸಾಲದ ಹೊರಬಾಕಿ ಸುಸ್ತಿ ಇದ್ದಲ್ಲಿ ಮರುಪಾವತಿ ದಿನಾಂಕದವರೆಗಿನ ಸಂಪೂರ್ಣ ಬಡ್ಡಿಯನ್ನು ಹಾಗೂ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ದಿನಾಂಕ: 31.07.2019 ರೊಳಗೆ ಪಾವತಿಸತಕ್ಕದ್ದು.<br>5. ಎರಡು ಸಹಕಾರ ಸಂಘಗಳಲ್ಲಿ ಸಾಲ ಪಡೆದಿದ್ದಲ್ಲಿ ಒಂದು ಸಹಕಾರ ಸಂಘದಲ್ಲಿ ಮಾತ್ರ ಸಾಲ ಮನ್ನಾ ದೊರೆಯುವುದು. |

**ಸಂಖ್ಯೆ: ಸಿಒ 412 ಸಿಎಲ್‌ಎಸ್ 2020**

**(ಎಸ್.ಟಿ. ಸೋಮಶೇಖರ್)**
ಸಹಕಾರ ಸಚಿವರು